## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂಃ 958/2019

| **ಚಾಸಾ ಃ** | **1** | **ಪ್ರಾಸಾಃ-** | **1** |
|---|---|---|---|

| | |
|---|---|
| ಹೆಸರು | ಭೈರಾಜು |
| ತಂದೆಯ ಹೆಸರು | ಮುತ್ತುಬೈರಯ್ಯ |
| ವಯಸ್ಸು | **40** |
| ಉದ್ಯೋಗ | ಖಾಸಗಿ ಕೆಲಸ |
| ವಿಳಾಸ | ಹಾರೋಹಳ್ಳಿ |

- - - - - - - - - - - - - - - - - - - - - - - - - - - - - -

**ದಿಃ10.06.2024ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ಮೃತ ಮುತ್ತುಬೈರಯ್ಯ ನನಗೆ ತಂದೆಯಾಗಬೇಕು. ದಿ.**5.7.2019** ರಂದು ನಾನು ಮತ್ತು ನನ್ನ ತಂದೆ ಬಿಡದಿ ರಸ್ತೆ, ಹಾರೋಹಳ್ಳಿಯಲ್ಲಿರುವ ಮಯೂರ ಬೇಕರಿಯಿಂದ ಮನೆ ಕಡೆಗೆ ನಡೆದುಕೊಂಡು ಬರುತ್ತಿದ್ದಾಗ ಹಿಂಬದಿಯಿಂದ ಒಂದು ದ್ವಿಚಕ್ರ ವಾಹನ ಅತಿವೇಗ ಮತ್ತು ಅಜಾಗರೂಕತೆಯಿಂದ ಬಂದು ನನ್ನ ತಂದೆಗೆ ಡಿಕ್ಕಿ ಪಡಿಸಿರುತ್ತದೆ. ನನ್ನ ತಂದೆ ರಸ್ತೆಯ ಮೇಲೆ ಬಿದ್ದಿದ್ದು, ತಕ್ಷಣ ನನ್ನ ತಂದೆಯ ಹಿಂದಲೆಯಿಂದ ತೀವ್ರ ರಕ್ತಸ್ರಾವವಾಗಿದ್ದು, ಹಣೆಯ ಮೇಲೆ ರಕ್ತ ಸೋರಿಕೆಯಾಗಿದ್ದು, ಬಲಗಾಲಿಗೆ ಮೂಳೆ ಮುರಿತವಾಗಿದ್ದು ಹಾಗೂ ಕಾಲಿನ ಬೆರಳುಗಳಿಗೆ ಏಟುಳಾಗಿರುತ್ತದೆ. ಸದರಿ ಅಪಘಾತ ಪಡಿಸಿದ ವಾಹನದ ನಂ.ಕೆಎ-**42**-ಎ-**6456** ನಂಬರಿನ ಟಿವಿಎಸ್ ಕಂಪನಿಯ ಕೆಂಪು ಬಣ್ಣದ ವಾಹನವಾಗಿತ್ತು. ಸದರಿ ವಾಹನವನ್ನು ಒಬ್ಬ ಹುಡುಗ ನಡೆಸುತ್ತಿದ್ದು, ಸದರಿ ಅಪಘಾತ ಪಡಿಸಿದ ವ್ಯಕ್ತಿಯನ್ನು

ನ್ಯಾಯಾಲಯದಲ್ಲಿ ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ವ್ಯಕ್ತಿ 1 ನೇ ಆರೋಪಿಯಾಗಿರುತ್ತಾನೆ.

ತಕ್ಷಣ ಆಂಬ್ಯೂಲೆನ್ಸ್ ಗೆ ಫೋನ್ ಮಾಡಿ ಆಂಬ್ಯೂಲೆನ್ಸ್ ನಲ್ಲಿ ಹಾರೋಹಳ್ಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಸದರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದು, ನಂತರ ದಿ.15.7.2019 ರಂದು ಬೆಳಿಗ್ಗೆ 10:00 ಗಂಟೆಗೆ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾರೆಂದು ವೈದ್ಯರು ತಿಳಿಸಿರುತ್ತಾರೆ.

ದಿನಾಂಕ.8.7.2019 ರಂದು ಹಾರೋಹಳ್ಳಿ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಮರುದಿವಸ ಅಪಘಾತವಾದ ಸ್ಥಳದಲ್ಲಿ ಪೊಲೀಸರು ನನ್ನನ್ನು ಕರೆದುಕೊಂಡು ಹೋಗಿ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಮಹಜರ್ ಕಾಲಕ್ಕೆ ಹರೀಶ್ ಮತ್ತು ಕೆಂಚಪ್ಪ ಇವರು ಹಾಜರಿದ್ದರು. ಸದರಿ ಪಂಚನಾಮೆ ಮಾಡಿ ಜಖಂಗೊಂಡ ದ್ವಿಚಕ್ರ ವಾಹನವನ್ನು ಪೊಲೀಸರು ತೆಗೆದುಕೊಂಡು ಹೋಗಿರುತ್ತಾರೆ. ಸದರಿ ಅಪಘಾತ ಪಡಿಸಿದ ವಾಹನದ ಡೂಮ್ ಗೆ ಡ್ಯಾಮೇಜ್ ಆಗಿದ್ದು, ಇಂಡಿಕೇಟರ್ ಒಡೆದುಹೋಗಿದ್ದು, ಸದರಿ ವಾಹನದ ಹಿಂಬದಿಯಲ್ಲಿ ಅಮ್ಮ ಎಂದು ಬರೆಯಲಾಗಿತ್ತು.

ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ), ದಿ.15.07.2019 ರಂದು ಚಿಕಿತ್ಸೆ ಫಲಕಾರಿಯಾಗದೇ ತಂದೆ ಮೃತಪಟ್ಟ ಬಗ್ಗೆ ನೀಡಿದ ದಾಖಲೆಯನ್ನು ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-2(ಎ), ಪಂಚೆನಾಮೆಯನ್ನು ನಿಪಿ-3, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಪೊಲೀಸರಿಗೆ ನಾನು ಹೇಳಿಕೆ ನೀಡಿರುವುದಿಲ್ಲ.

**<u>ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಅವರ ಪಾಟೀ ಸವಾಲನ್ನು ಮಾಡಲು ಅವಕಾಶ ಕೋರಿದ್ದು, ನೀಡಲಾಯಿತು.</u>**

**<u>ಪಾಟೀ ಸವಾಲು ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ದಿನಾಂಕ.09.07.2019 ರಂದು ಬೆಳಿಗ್ಗೆ 9ಃ00 ರಿಂದ 10ಃ30 ರ ಸಮಯದಲ್ಲಿ ಪೊಲೀಸರು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆಯ ಕಾಲಕ್ಕೆ ಪಂಚರಾದ ಅರ್ಜುನ್ ಮತ್ತು ಸತ್ಯಪ್ಪ ಇದ್ದರು ಎಂದರೆ ಸರಿ. ದಿ.2.8.2019 ರಂದು ಪೊಲೀಸರಿಗೆ ನನ್ನ ಮರುಹೇಳಿಕೆ ನೀಡಿರುತ್ತೇನೆಂದರೆ ಸರಿ.

**<u>ಪಾಟೀ ಸವಾಲು ಶ್ರೀ ಎಂ.ಎಂ ಆರೋಪಿ ಪರ ವಕೀಲರಿಂದಃ-</u>**

ಅಪಘಾತವಾದ ಸಂದರ್ಭದಲ್ಲಿ ನಾನು ನನ್ನ ತಂದೆಯೊಂದಿಗೆ ಇದ್ದೆನು. ಮಯೂರ ಬೇಕರಿಯಿಂದ ಪೂರ್ವಭಿಮುಖವಾಗಿ ನಮ್ಮ ಮನೆ ಇದೆ ಎಂದರೆ ಸರಿ. ಮಯೂರ ಬೇಕರಿ ಮುಂದಿನ ರಸ್ತೆ ಪೂರ್ವಪಶ್ಚಿಮವಾಗಿರುತ್ತದೆ ಎಂದರೆ ಸರಿ. ರಸ್ತೆಯ ದಕ್ಷಿಣಕ್ಕೆ ಮಯೂರ ಬೇಕರಿ ಇದೆ ಎಂದರೆ ಸರಿ. ಮಯೂರ ಬೇಕರಿಯ ಮುಂದೆ ಐದು ಅಡಿ ಪುಟ್‌ಪಾತ್ ರಸ್ತೆ ಇದೆ ಎಂದರೆ ಸರಿ. ಸದರಿ ಅಪಘಾತ ಮಯೂರ ಬೇಕರಿಯ ಎದುರುಗಡೆ ಆಗಿರುತ್ತದೆ ಎಂದರೆ ಸರಿ. ಸದರಿ ಅಪಘಾತ ಮಯೂರ ಬೇಕರಿಯ ಉತ್ತರ ದಿಕ್ಕಿನ ರಸ್ತೆಯ ಅಂಚಿಗೆ ಆಗಿರುತ್ತದೆ ಎಂದರೆ ಸರಿ. ಸದರಿ ಅಪಘಾತ ಟಾರ್ ರಸ್ತೆಯ ಅಂಚಿನಲ್ಲಿ ಪಾದಚಾರಿ ರಸ್ತೆಗೆ ಹೊಂದಿಕೊಂಡಂತೆ 2 ಅಡಿ ಟಾರ್ ರಸ್ತೆಯ ಮೇಲೆ ಆಗಿರುತ್ತದೆ ಎಂದರೆ ಸರಿ. ಮಯೂರ ಬೇಕರಿಗೆ ಹೊಂದಿಕೊಂಡಂತೆ ಪಶ್ಚಿಮಕ್ಕೆ ದಿನಸಿ ಅಂಗಡಿ ಇದೆ ಎಂದರೆ ಸರಿ. ಸದರಿ ದಿನಸಿ ಅಂಗಡಿಯ ಪಶ್ಚಿಮಕ್ಕೆ ಹೊಂದಿಕೊಂಡಂತೆ ಮದ್ಯದ ಅಂಗಡಿ ಇದೆ ಎಂದರೆ ಸರಿ. ಮಯೂರ ಬೇಕರಿಯಿಂದ ನಮ್ಮ ಮನೆಗೆ

ಹೋಗಬೇಕಾದರೆ ಮಯೂರ ಬೇಕರಿಯ ಪುಟ್‌ಪಾತ್ ಮೇಲೆ ನಡೆದುಕೊಂಡು ನಮ್ಮ ಮನೆಗೆ ಹೋಗಬೇಕಾಗುತ್ತದೆ ಎಂದರೆ ಸಾಕ್ಷಿಯು ಮಯೂರ ಬೇಕರಿಯ ಮುಂಭಾಗದ ರಸ್ತೆ ದಾಟಿಕೊಂಡು ನಮ್ಮ ಮನೆಗೆ ಹೋಗಬೇಕಾಗುತ್ತದೆ ಎಂದು ನುಡಿಯುತ್ತಾರೆ. ಅಪಘಾತದ ಸಂದರ್ಭದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆಗೆ ಮದ್ಯ ಸೇವನೆ ಮಾಡುವ ಹವ್ಯಾಸ ಇತ್ತು ಎಂದರೆ ಸರಿ. ಸದರಿ ಅಪಘಾತದ ದಿನ ನನ್ನ ತಂದೆ ಮದ್ಯ ಸೇವನೆ ಮಾಡಿದ್ದರು ಎಂದರೆ ಸಾಕ್ಷಿಯು ಸದರಿ ದಿನ ಮದ್ಯ ಸೇವನೆ ಮಾಡಿರಲಿಲ್ಲ ಎಂದು ನುಡಿಯುತ್ತಾರೆ. ಮಯೂರ ಬೇಕರಿಯಿಂದ ಪೂರ್ವದ ಕಡೆಗೆ **200** ರಿಂದ **300** ಅಡಿ ಅಂತರದಲ್ಲಿ ಹಾರೋಹಳ್ಳಿ ಸರ್ಕಲ್ ಮತ್ತು ಬಸ್ ನಿಲ್ದಾಣ ಇದೆ ಎಂದರೆ ಸರಿ. ಸದರಿ ಹಾರೋಹಳ್ಳಿ ಬಸ್ ನಿಲ್ದಾಣದ ಹತ್ತಿರ ಐದು ಕಡೆಯಿಂದ ರಸ್ತೆಗಳು ಬಂದು ಸೇರುತ್ತವೆ ಎಂದರೆ ಸರಿ. ಮಯೂರ ಬೇಕರಿಯ ಸುತ್ತಮುತ್ತ ಅಂಗಡಿಗಳು ಇವೆ ಎಂದರೆ ಸರಿ. ಬಿಡದಿ ಹಾರೋಹಳ್ಳಿ ರಸ್ತೆ ಯಾವತ್ತು ಜನನಿಬಿಡ ಪ್ರದೇಶ ಎಂದರೆ ಸರಿ.

ಮಯೂರ ಬೇಕರಿಯಿಂದ ನಾವು ಪೂರ್ವಭಿಮುಖವಾಗಿ ಹೋಗುತ್ತಿದ್ದೇವು. ನನ್ನ ತಂದೆಯ ಎಡಭಾಗಕ್ಕೆ ನಾನು ಇದ್ದು, ನನ್ನ ಬಲಭಾಗಕ್ಕೆ ನನ್ನ ತಂದೆ ಇದ್ದರು. ನಾವು ನಡೆದುಕೊಂಡು ಹೋಗುವಾಗ ನಮ್ಮ ಹಿಂದೆ ಬರುತ್ತಿರುವ ವಾಹನ ಯಾವ ರೀತಿ ಬರುತ್ತದೆ ಎಂದು ಗೊತ್ತಾಗುವುದಿಲ್ಲ ಎಂದರೆ ಸರಿ. ಅಪಘಾತ ಪಡಿಸಿದ ವಾಹನ ಗಂಟೆಗೆ ಎಷ್ಟು ಕೀ.ಮಿ ವೇಗದಲ್ಲಿ ಬರುತ್ತಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಅಪಘಾತ ಸ್ಥಳದಲ್ಲಿ ನಮ್ಮ ತಂದೆಗೆ ಹೊರತುಪಡಿಸಿ ಬೇರೆ ಯಾರಿಗೂ ವಾಹನ ಡಿಕ್ಕಿ ಪಡಿಸಿರುವುದಿಲ್ಲ. ನಮ್ಮ ತಂದೆಗೆ ಡಿಕ್ಕಿ ಪಡಿಸುವ ಪೂರ್ವದಲ್ಲಿ ಸದರಿ ವಾಹನದ ಚಾಲಕ ಅಪಘಾತ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಅಪಘಾತದ ಸಮಯದಲ್ಲಿ ಸಾಕಷ್ಟು ವಾಹನಗಳ ಸಂಚಾರ ಇರುವುದರಿಂದ ಅತಿವೇಗವಾಗಿ ವಾಹನಗಳನ್ನು ಚಲಿಸಲು ಬರುವುದಿಲ್ಲ ಎಂದರೆ ಸಾಕ್ಷಿಯು ಸದರಿ ದಿನ ಅಪಘಾತದ ಸಮಯದಲ್ಲಿ ವಾಹನ ಸಂಚಾರ

ಕಡಿಮೆ ಇತ್ತು ಎಂದು ನುಡಿಯುತ್ತಾರೆ. ವಾಹನ ಸಂಚಾರ ಕಡಿಮೆ ಇರುವುದಕ್ಕೆ ಸಂಬಂಧಿಸಿದಂತೆ ನಾನು ದೂರಿನಲ್ಲಿ ನಮೂದಿಸಿಲ್ಲ.

ನನ್ನ ತಂದೆ ಅಪಘಾತವಾದಾಗ ಹಿಂಬದಿಗೆ ಬಿದ್ದಿರುತ್ತಾರೆ. ಅಪಘಾತದ ಸಂದರ್ಭದಲ್ಲಿ ನನಗೆ ಯಾವುದೇ ಗಾಯಗಳು ಆಗಿರುವುದಿಲ್ಲ. ಅಪಘಾತ ಸ್ಥಳದಲ್ಲಿ ರಕ್ತ ಬಿದ್ದಿತ್ತು. ನಾನು ರಕ್ತ ಬಿದ್ದಿರುವುದನ್ನು ಒಂದು ಕಡೆ ಮಾತ್ರ ನೋಡಿರುತ್ತೇನೆ. ಅಪಘಾತ ಪಡಿಸಿದ ಸ್ಥಳದಿಂದ 2-3 ಅಡಿ ನಮ್ಮ ತಂದೆ ಬಿದ್ದ ಸ್ಥಳದಿಂದ ಪಶ್ಚಿಮಕ್ಕೆ ವಾಹನ ಬಿದ್ದಿತ್ತು. ದ್ವಿಚಕ್ರ ವಾಹನ ಸವಾರ ಕೆಳಗೆ ಬಿದ್ದಿರುವುದನ್ನು ನಾನು ನೋಡಿರುವುದಿಲ್ಲ. ಅಪಘಾತ ಸ್ದಳದಲ್ಲಿ ಅಪಘಾತಕ್ಕೆ ಒಳಗಾದ ವಾಹನ ಜಖಂ ಆಗಿ ಚೂರುಗಳು ಬಿದ್ದಿದ್ದವು. ಅಪಘಾತವಾದಾಗ ನಮ್ಮ ಕಡೆಯವರು ನನ್ನನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ, ಸಾರ್ವಜನಿಕರು ಇದ್ದರು. ಸದರಿ ಸಾರ್ವಜನಿಕರ ಹೆಸರುಗಳನ್ನು ನನಗೆ ಹೇಳಲು ಬರುವುದಿಲ್ಲ.

ಸದರಿ ದಿನ ನನ್ನ ತಂದೆ ಮದ್ಯ ಸೇವನೆ ಮಾಡಿ ರಸ್ತೆಯ ಮದ್ಯದಲ್ಲಿ ನಿಂತಿದ್ದರು ಎಂದರೆ ಸರಿಯಲ್ಲ. ಸದರಿ ಸಂದರ್ಭದಲ್ಲಿ ಯಾವುದೋ ವಾಹನ ನಮ್ಮ ತಂದೆಗೆ ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆರೋಪಿಯ ವಾಹನ ಡಿಕ್ಕಿ ಪಡಿಸಿರುತ್ತದೆ ಎಂದು ನುಡಿಯುತ್ತಾರೆ. 1 ನೇ ಆರೋಪಿ ನನ್ನ ತಂದೆಗೆ ಅಪಘಾತವಾದ ನಂತರ ಉಪಚರಿಸಿ ಆಂಬ್ಯುಲೆನ್ಸ್ ಗೆ ಆತನೆ ಕರೆ ಮಾಡಿ ಕರೆಯಿಸಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾನೆಂದರೆ ಸರಿಯಲ್ಲ. ಅಪಘಾತವಾದ ಸ್ಥಳದಿಂದ 500 ಮೀಟರ್ ಅಂತರದಲ್ಲಿ ಪೊಲೀಸ್ ಠಾಣೆ ಮತ್ತು ಆಸ್ಪತ್ರೆ ಇದೆ ಎಂದರೆ ಸಾಕ್ಷಿಯು ಒಂದು ಕೀ.ಮಿ ಅಂತರ ಇದೆ ಎಂದು ನುಡಿಯುತ್ತಾರೆ. ಅಪಘಾತವಾದ ತಕ್ಷಣ ಠಾಣೆಗೆ ವಿಷಯ ತಿಳಿಸಲು ಯಾವುದೇ ಅಡ್ಡಿ ಇರಲಿಲ್ಲ ಆದರೆ ನಾನು ಗಾಬರಿಯಾಗಿದ್ದರಿಂದ ವಿಷಯ ತಿಳಿಸಿಲ್ಲ ಎಂದು ನುಡಿಯುತ್ತಾರೆ. ನಾನು ಅಪಘಾತವಾದ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಆಸ್ಪತ್ರೆಯಲ್ಲಿ ಇದ್ದುದ್ದುದರಿಂದ ಮೂರು ದಿನಗಳ ವರೆಗೆ ಠಾಣೆಗೆ ಬಂದು ದೂರು ನೀಡಲು ಆಗಿರುವುದಿಲ್ಲ, ನಾನು ನಂತರ ಬಂದು ಆರೋಪಿತರ ವಿರುದ್ದ ಸುಳ್ಳು ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ. ನನ್ನ ತಂದೆಗೆ ನಾನು ಅಲ್ಲದೆ ಇಬ್ಬರು ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು ಇರುತ್ತಾಳೆ ಎಂದರೆ ಸರಿ. ನನ್ನ ಸಮಕ್ಷಮ ಅಪಘಾತವಾಗಿದ್ದರೆ ನಾನು ತಕ್ಷಣ ದೂರು ಕೊಡುತ್ತಿದ್ದೆ, ತಕ್ಷಣ ದೂರು ಕೊಡದೆ ಇರುವುದರಿಂದ ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ಸದರಿ ದೂರನ್ನು ನಾನು ಬರೆದಿರುವುದಿಲ್ಲ. ದೂರಿನಲ್ಲಿ ನನ್ನ ತಂದೆಗೆ ಅಪಘಾತದಲ್ಲಿ ಆದ ಗಾಯಗಳ ಕುರಿತು ನಮೂದಿಸಿರುತ್ತೇನೆ. ಪೊಲೀಸರು ಪಂಚನಾಮೆಗೆ ಬರುವಂತೆ ಲಿಖಿತ ನೋಟಿಸ್ ನೀಡಿರುವುದಿಲ್ಲ, ಮೌಖಿಕವಾಗಿ ಕೋರಿಕೆಯ ಮೇರೆಗೆ ಹೋಗಿರುತ್ತೇನೆ. ಪಂಚನಾಮೆಯ ಕಾಲಕ್ಕೆ ಕೆಲವು ಅಂಗಡಿಗಳು ತೆರೆದಿದ್ದು, ಕೆಲವು ಅಂಗಡಿಗಳು ಮುಚ್ಚಲ್ಪಟ್ಟಿದ್ದವು. ಸ್ಥಳದಲ್ಲಿನ ಅಂಗಡಿಯವರನ್ನು ಪೊಲೀಸರು ಕರೆಸಿದ ಬಗ್ಗೆ ನನಗೆ ಗೊತ್ತಿಲ್ಲ. ಪಂಚನಾಮೆಯ ಕಾಲಕ್ಕೆ ಹರೀಶ್ ಹೆಚ್.ಕೆ ಮತ್ತು ಸತ್ಯಪ್ಪ ಇಬ್ಬರು ಇದ್ದರು. ಪಂಚನಾಮೆಯ ಕಾಲಕ್ಕೆ ಪೊಲೀಸರು ಅಪಘಾತ ಸ್ಥಳದಲ್ಲಿ ಅಳತೆ ಮಾಡಿ ಬರೆದುಕೊಳ್ಳುತ್ತಿದ್ದರು. ಸ್ಥಳದಲ್ಲಿ ಅಪಘಾತ ಪಡಿಸಿ ಜಖಂಗೊಂಡ ವಾಹನವನ್ನು ಮತ್ತು ರಸ್ತೆಯ ಮೇಲೆ ಬಿದ್ದಿರುವ ವಾಹನದ ಚೂರುಗಳನ್ನು ನೋಡಿ ಮತ್ತು ರಕ್ತ ಬಿದ್ದಿರುವ ಜಾಗವನ್ನು ನೋಡಿ ಪಂಚನಾಮೆ ಮಾಡಿರುತ್ತಾರೆ. ಅಪಘಾತವಾದ ಸ್ಥಳದಿಂದ ವಾಹನವನ್ನು ಅಮಾನತ್ತುಪಡಿಸಿಕೊಂಡು ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ. ಮಹಜರ್ ಮಾಡುವ ದಿನಾಂಕದಂದು ಸ್ಥಳದಲ್ಲಿ ಮತ್ತು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಪಂಚನಾಮೆಯನ್ನು ಬರೆದ ನಂತರ ಪೊಲೀಸರು ನನಗೆ ಓದಿ ಹೇಳಿಲ್ಲ. ಪಂಚನಾಮೆಯನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಸತ್ಯಪ್ಪ ಮತ್ತು ಹರೀಶ್ ಪಂಚನಾಮೆಗೆ ನನ್ನೊಂದಿಗೆ ಸಹಿ ಮಾಡಿರುತ್ತಾರೆ. ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ, ಮಹಜರ್ ಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ.

ನಾನು ಪೊಲೀಸರಿಗೆ ಹೇಳಿಕೆ ಮತ್ತು ಮರುಹೇಳಿಕೆ ನೀಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಆರೋಪಿ ಯಾವುದೇ ಅಪಘಾತ ಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಸುಳ್ಳು ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆ ಃಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಓ ಹೇ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**